# ಹದಿ ಹರೆಯದ ಕಂಗಳಲ್ಲಿ ಗರಿಗೆದರಿದ 'ಅಮೆರಿಕದ ಕನಸು'

ಬೆಂಗಳೂರು, ಜುಲೈ 9– ಜಕ್ಕೂರಿನ ಸರ್ಕಾರಿ ಶಾಲೆಯ ಅಂಗಳದಲ್ಲಿ ಬೆಳೆದ ಮೂವರು ಚಿಣ್ಣರ ಕಂಗಳಲ್ಲಿ ಈಗ ಅದಮ್ಯ ಹುರುಪು ತುಳುಕುತ್ತಿದೆ; ಕನಸಲ್ಲೂ ಕಾಣದ 'ದೂರದ' ಅಮೆರಿಕದಲ್ಲಿ ಕಾಲೂರುವ ಬಗ್ಗೆ ಕನಸುಗಳು ಗರಿಗೆದರಿವೆ.

'ನಮಗೆಲ್ಲ ಒಂಥರಾ ಖುಷಿಯಾಗುತ್ತಿದೆ; ಅಲ್ಲಿಗೆ ಬರುವ ಬೇರೆಬೇರೆ ದೇಶಗಳ ಮಕ್ಕಳ ಜತೆ ಬೆರೆಯುವ ಅವಕಾಶಕ್ಕಾಗಿ ಕಾಯುತ್ತಿದ್ದೇವೆ'– ಅಮೆರಿಕದ ಬೋಸ್ಟನ್‌ನಲ್ಲಿ ಜುಲೈ 13ರಿಂದ ನಡೆಯಲಿರುವ ಐದು ದಿನಗಳ 'ವಿಶ್ವ ಹದಿ ಹರೆಯದವರ ಶೃಂಗಸಭೆ' (ಟೀನ್ ಸಮ್ಮಿಟ್)ಗೆ ತೆರಳಲು ತುದಿಗಾಲಲ್ಲಿ ನಿಂತಿರುವ ರಾಜ್ಯದ ಮೂವರು ಮಕ್ಕಳ ಮನೋ ಇಂಗಿತ ಇದು.

**ಸಂಸ್ಕೃತಿ ಸಮ್ಮಿಳನ:** ಪ್ರಮುಖ ಕಂಪ್ಯೂಟರ್ ವಹಿವಾಟು ಕಂಪನಿ ಇಂಟೆಲ್‌ನ ಅಂಗ ಸಂಸ್ಥೆ 'ಇಂಟೆಲ್ ಕ್ಲಬ್‌ಹೌಸ್' ಬೋಸ್ಟನ್‌ನಲ್ಲಿ ಆಯೋಜಿಸಿರುವ 'ಟೀನ್ ಸಮ್ಮಿಟ್'ಗೆ ದೇಶದಿಂದ ಆಯ್ಕೆಯಾದ ಆರು ಮಕ್ಕಳಲ್ಲಿ ರಾಜ್ಯದ ಈ ಮೂವರು ಇದ್ದಾರೆ. ಪ್ರತಿ ವರ್ಷ ನಡೆಯುವ ಟೀನ್ ಸಮ್ಮಿಟ್ ವಿವಿಧ ದೇಶಗಳ, ವಿವಿಧ ಸಂಸ್ಕೃತಿಗಳ ಸಮ್ಮಿಲನ.

ಜಕ್ಕೂರು ಶಾಲೆಯ 8ನೇ ತರಗತಿ ವಿದ್ಯಾರ್ಥಿನಿ ರೇವತಿ ರಾಣಿ, 8ನೇ ತರಗತಿ ವಿದ್ಯಾರ್ಥಿ ಆದೇಶ್ ಪ್ರಕಾಶ್ ಹಾಗೂ ಮೊದಲ ಪಿಯುಸಿ ವಿದ್ಯಾರ್ಥಿ ಸುನಿಲ್ ಕುಮಾರ್ ಭಾನುವಾರ ಅಮೆರಿಕಕ್ಕೆ ತೆರಳಲಿದ್ದಾರೆ. ಜಕ್ಕೂರಿನ ಚಿಲ್ಡ್ರನ್ ಲವ್ ಕ್ಯಾಸಲ್ ಟ್ರಸ್ಟ್‌ನ ಇಂಟೆಲ್ ಕ್ಲಬ್‌ಹೌಸ್ ನೊಂದಿಗೆ ಒಂದು ವರ್ಷದಿಂದ ಇವರ ಒಡನಾಟ ಇದೆ. ಈ ಕ್ಲಬ್ ತಂತ್ರಜ್ಞಾನ ಹಾಗೂ ಸೃಜನಶೀಲತೆಯನ್ನು ಬೆಳೆಸುವ ಒಂದು ಸೇವಾ ಮನೋಭಾವದ ಸಂಸ್ಥೆ.

ಒಂದು ವರ್ಷದ ಹಿಂದೆ ಕಂಪ್ಯೂಟರ್ ಎಂದರೆ ಏನೆಂದೇ ತಿಳಿಯದಿದ್ದ ರೇವತಿ ರಾಣಿ ಈಗ ಕಂಪ್ಯೂಟರ್ ಮೂಲಕ ಫ್ಯಾಷನ್ ಡಿಸೈನ್ ಮಾಡುತ್ತಿದ್ದಾಳೆ. 'ಅಮೆರಿಕಕ್ಕೆ ಹೋಗುವುದೆಂದರೆ ಎಲ್ಲಿಲ್ಲದ ಖುಷಿ. ಇಂಟೆಲ್ ಕ್ಲಬ್‌ನಿಂದ ನಾವು ಸಾಕಷ್ಟು ಕಲಿತ್ತಿದ್ದೇವೆ' ಎಂದು ರೇವತಿ 'ಪ್ರಜಾವಾಣಿ' ಜತೆ ಸಂತಸ ಹಂಚಿಕೊಂಡಳು. ಮಳೆ ನೀರು ಸಂಗ್ರಹದ ಬಗ್ಗೆ ವಿಶೇಷ ಯೋಜನೆ ರೂಪಿಸಿರುವ ರೇವತಿಗೆ ಸಂಗೀತ, ನಾಟಕಗಳಲ್ಲೂ ಆಸಕ್ತಿ ಇದೆ.



ಇಂಟೆಲ್ ಕ್ಲಬ್‌ಹೌಸ್ ಅಮೆರಿಕದ ಬೋಸ್ಟನ್‌ನಲ್ಲಿ ಆಯೋಜಿಸಿರುವ 'ಟೀನ್ ಸಮ್ಮಿಟ್'ನಲ್ಲಿ ಭಾಗವಹಿಸಲು ಉತ್ಸುಕರಾಗಿರುವ ವಿದ್ಯಾರ್ಥಿಗಳು. (ಎಡದಿಂದ ಬಲಕ್ಕೆ) ವಿದ್ಯಾರ್ಥಿ ಸುನಿಲ್‌ಕುಮಾರ್ ಎಸ್.ಬಿ., ಕ್ಲಬ್‌ಹೌಸ್ ಸಂಯೋಜಕಿ ಸಂಧ್ಯಾ, ಆದೇಶ್ ಪ್ರಕಾಶ್ ಹಾಗೂ ರೇವತಿ ರಾಣಿ.

'ನನಗೆ ಈ ಶೃಂಗಸಭೆಯ ಬಗ್ಗೆ ವೆಬ್ ಸೈಟ್ ರೂಪಿಸಬೇಕೆನ್ನುವ ಬಯಕೆ ಇದೆ' ಎನ್ನುವುದು ಪ್ರಥಮ ಪಿಯುಸಿ ವಿದ್ಯಾರ್ಥಿ ಸುನಿಲ್ ನುಡಿ. ಎರಡು ವರ್ಷಗಳ ಹಿಂದೆ ಈ ಕ್ಲಬ್‌ನಲ್ಲಿ ಕಂಪ್ಯೂಟರ್ ಹಾಗೂ ವಿವಿಧ ಸೃಜನಶೀಲ ಚಟುವಟಿಕೆಗೆ ಮನ ತೆರೆದುಕೊಂಡ ಈತ ಕೊಂಚ ನಾಚಿಕೆ ಸ್ವಭಾವದವ. ಆದರೆ, ಈತನ ಕನಸು ಮಾತ್ರ ಬಹು ದೊಡ್ಡದು. ಸಾಫ್ಟ್‌ವೇರ್ ಬಗ್ಗೆ ಅತೀವ ಆಸಕ್ತಿ ತೋರುವ ಈತ ತಾನು ಐಎಎಸ್ ಅಧಿಕಾರಿಯಾಗಬೇಕೆಂದು ಅಪೇಕ್ಷಿಸಿದ್ದಾನೆ.

'ಅಲ್ಲಿ ಬೇರೆ ಬೇರೆ ಕಡೆಗಳಿಂದ ಮಕ್ಕಳು ಬಂದಿರುತ್ತಾರೆ. ಅವರ ಜತೆ ಬೆರೆಯುವುದು, ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದನ್ನು ನಾನು ಕಾಯುತ್ತಿದ್ದೇನೆ' ಎಂದು ಹೇಳುತ್ತಾನೆ ಆದೇಶ್. 'ನಾನು ಅಮೆರಿಕಕ್ಕೆ ಹೋಗುತ್ತಿದ್ದೇನೆ ಎಂದು ಗೊತ್ತಾದಾಗ ಮನೆಯಲ್ಲಿ ಎಲ್ಲರೂ ಬೆನ್ನು ತಟ್ಟಿದರು; ಒಳ್ಳೆಯ ಹೆಸರು ತಾ ಎಂದು ಹಾರೈಸಿದರು' ಎನ್ನಲು ಅವನು ಮರೆಯಲಿಲ್ಲ. ಛಾಯಾ ಗ್ರಹಣದ ಬಗ್ಗೆ ಆಸಕ್ತಿ ಇರುವ ಆದೇಶ್, ಕಳೆದ ಬೇಸಿಗೆ ಶಿಬಿರದ ಸಂದರ್ಭ ಸ್ವಯಂ ಆಸಕ್ತಿಯಿಂದ ಭಾರತೀಯ ಶೈಲಿಯ ಕಿರು ಸಿನಿಮಾವೊಂದನ್ನು ಸಂಕಲಿಸಿದ್ದಾನೆ.

ಈ ಮಕ್ಕಳ ಜತೆ ಕ್ಲಬ್‌ನ ಸಂಚಾಲಕಿ ಸಂಧ್ಯಾ ಗಟ್ಟಿ ಹಾಗೂ ಪ್ರದೀಪ್ ಅವರು ಅಮೆರಿಕಕ್ಕೆ ತೆರಳುತ್ತಿದ್ದಾರೆ. 'ಮೊದಲ ಬಾರಿಗೆ ಮೂವರನ್ನು 'ಟೀನ್ ಸಮ್ಮಿಟ್'ಗೆ ಕರೆದೊಯ್ಯುತ್ತಿರುವುದು ಇತರೆ ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡಿದಂತೆ' ಎಂದು ಸಂಧ್ಯಾ ಹೇಳುತ್ತಾರೆ.